**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ**

**ಅಸಲು ದಾವಾ ಸಂ.262/2023 P.W.-1**

ದಿನಾಂಕಃ17-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದು ವರಿದ ಮುಖ್ಯ ವಿಚಾರಣೆ ಃ ವಾದಿ ಪರ ವಕೀಲರಿಂದ

ಸಾಕ್ಷಿಯು ಕೆಳಕಂಡ ದಾಖಲೆಗಳನ್ನು ಹಾಜರು ಮಾಡಿದ್ದು ಅವುಗಳನ್ನು ಕಾಲಂ 1 ರಲ್ಲಿ ತೋರಿಸಿದಂತೆ ನಿಶಾನೆಗೊಳಿಸಲಾಗಿದೆ.

| 1 | 2 |
|---|---|
| ನಿಪಿ-17 | ಬಿ ಕೆ ಪವನ್ ರವರ ಜನನ ಪ್ರಮಾಣ ಪತ್ರ |
| ನಿಪಿ-18 | ಬಿ.ಕೆ. ಪವನ್ ರವರ ಎಸ್ ಎಸ್ ಎಲ್ ಸಿ ಅಂಕ ಪಟ್ಟಿ |
| ನಿಪಿ-19 | ಪ್ರಮೋದ್ ರವರ ಜನನ ಪ್ರಮಾಣ ಪತ್ರ |
| ನಿಪಿ-20 | ಪ್ರಮೋದ್ ರವರ ಎಸ್ ಎಸ್ ಎಲ್ ಸಿ ಅಂಕ ಪಟ್ಟಿ |

ಪಾಟೀ ಸವಾಲುಃ **7** ರಿಂದ **9** ನೇ ಪ್ರತಿವಾದಿಗಳ ಪರ ಶ್ರೀಮತಿ ಸಿ ಎನ್ ಜೆ ವಕೀಲರಿಂದ ಃ-

ವಾದಿ ಹಾಗೂ 1 ರಿಂದ 6 ನೇ ಪ್ರತಿವಾದಿಯ ಮೂಲಪುರುಷ ಮಲ್ಲಪ್ಪ ಎಂದರೆ ಸರಿ. ಮಲ್ಲಪ್ಪನವರಿಗೆ ನಾಲ್ಕು ಜನ ಮಕ್ಕಳು ಎಂದರೆ ಸರಿ. ಎರಡು ಜನ ಗಂಡು ಮಕ್ಕಳು, ಎರಡು ಹೆಣ್ಣು ಮಕ್ಕಳು ಎಂದರೆ ಸರಿ. ಅವರ ಮಕ್ಕಳು ಗೌರಪ್ಪ, ಕೊಟ್ರಪ್ಪ, ಶಾರದಮ್ಮ, ಪಾರ್ವತಮ್ಮ ಆಗಿರುತ್ತಾರೆಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ. ನನ್ನ ತಂದೆ ಕೊಟ್ರಪ್ಪ ಮರಣ ಹೊಂದಿರುತ್ತಾರೆಂದರೆ ಸರಿ. ನನ್ನ ತಂದೆಗೆ ಇಬ್ಬರು ಹೆಂಡತಿಯರು ಗೌರಮ್ಮ ಮತ್ತು ಪದ್ಮಮ್ಮ ಎಂದರೆ ಸರಿ. ನಾವು ಕೋಟ್ರಪ್ಪನವರ 2 ನೇ ಹೆಂಡತಿಯಾದ ಪದ್ಮಮ್ಮನವರ ಮಕ್ಕಳು ಎಂದರೆ ಸರಿ. 1 ಮತ್ತು 2 ನೇ ಪ್ರತಿವಾದಿ ಮೊದಲನೇ ಹೆಂಡತಿ ಯಾದ ಗೌರಮ್ಮನವರ ಮಕ್ಕಳು ಎಂದರೆ ಸರಿ. 2017 ರಲ್ಲಿ ಮಲ್ಲಪ್ಪನವರ ಸೊಸೆ ಸರೋಜಮ್, ಶಾರದಮ್ಮ, ಪಾರ್ವತಮ್ಮ ಮತ್ತು ನನ್ನ ತಾಯಿ ಪದ್ಮಮ್ಮಹಾಗೂ 1

ಮತ್ತು 2 ನೇ ಪ್ರತಿವಾದಿಯರು ನೋಂದಾಯಿತ ವಿಭಾಗ ಪತ್ರವನ್ನು ಮಾಡಿಕೊಂಡಿರುತ್ತಾರೆಂದರೆ ಸರಿ. ವಿಭಾಗ ಪತ್ರದಂತೆ ವಿಭಾಗವಾದ ಆಸ್ತಿಗಳು ಅವರರವರ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ಸರಿ. ಸರ್ವೆ ನಂ.107/2 ರಲ್ಲಿ ಬೆಟ್ಟತಾವರೆಕೆರೆ ಗ್ರಾಮದ 1 ಎಕರೆ 18 ಗುಂಟೆ ಜಮೀನನ್ನು ಮೇಲೆ ತಿಳಿಸಿದ ವ್ಯಕ್ತಿಗಳೆಲ್ಲಾ ಸೇರಿ ವಿಭಾಗ ಮಾಡಿಕೊಂಡಿರುತ್ತಾರೆಂದರೆ ಸರಿ. 2 ನೇ ಪ್ರತಿವಾದಿ 4 ರಿಂದ 6 ನೇ ಪ್ರತಿವಾದಿಗೆ ತಲಾ 50 ಸಾವಿರ ಹಣವನ್ನು ನೀಡಿ ಅವರುಗಳ ಹಿಸ್ಸೆಯನ್ನು 2 ನೇ ಪ್ರತಿವಾದಿ ಖರೀದಿ ಮಾಡಿರುತ್ತಾರೆಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಆದ್ದರಿಂದ 38 ಗುಂಟೆ 2 ನೇ ಪ್ರತಿವಾದಿ ಹೆಸರಿಗೆ ವಿಭಾಗ ಪತ್ರದಲ್ಲಿ ತೋರಿಸಲಾಗಿರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ. ಸದರಿ ಸರಿವೆ ನಂ ನಲ್ಲಿ 10 ಗುಂಟೆ ನಿಮ್ಮ ತಾಯಿ ಹೆಸರಿಗೆ ಬಂದಿರುತ್ತದೆ ಎಂದರೆ ಸರಿ. ಉಳಿದ 10 ಗುಂಟೆ 1 ನೇ ಪ್ರತಿವಾದಿ ಹೆಸರಿಗೆ ಬಂದಿರುತ್ತದೆ ಎಂದರೆ ಸರಿ. 1 ಮತ್ತು 2 ನೇ ಪ್ರತಿವಾದಿಗೆ ಬಂದ ಸ್ವತ್ತನ್ನು ಅವರು 7 ರಿಂದ 9 ನೇ ಪ್ರತಿವಾದಿಗಳಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.

ಸಹಿ/-
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ರವರು, ತರೀಕೆರೆ.